ದಿನಾಂಕ : 25-07-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್ ವಕೀಲರಿಂದ**

ನಮ್ಮ ಮನೆ ಹೊಲದಲ್ಲಿ ಇದೆ ಎನ್ನುವುದು ಸರಿ. ನಾವು ವಾಸ ಮಾಡುವ ಪ್ರದೇಶಕ್ಕೆ ನೀರಲಕೊಡಿ ಎಂದು ಕರೆಯುತ್ತಾರೆ ಎನ್ನುವುದು ಸರಿ. ಚಾಸಾಃ 1 ನೇಮಿನಾಥ ಬಾಬನ್ನವರ, ಚಾಸಾಃ 7 ಅರಿಹಂತ ಬಾಬನ್ನವರ, ಚಾಸಾಃ 8 ಪೂನಂಜಿ ಬಾಬನ್ನವರ ನನಗೆ ಅಣ್ಣತಮ್ಮಂದಿರಾಗಬೇಕು ಎನ್ನುವುದು ಸರಿ. ಚಾಸಾಃ 9 ಪ್ರವೀಣ ಆದಪ್ಪಗೋಳ, ಚಾಸಾಃ 10 ಅಜಿತ ಬಾಬನ್ನವರ, ಚಾಸಾಃ 11 ಹಣಮಂತ ಬಾಬನ್ನವರ ಅವರು ನನ್ನ ಸಂಬಂಧಿಕರು ಎನ್ನುವುದು ಸರಿ. ಚಾಸಾಃ 7 ಅರಿಹಂತ ಬಾಬನ್ನರವರಿಗೆ ಸಿದ್ದು ಹುಲ್ಲೋಳ್ಳಿ ಎಂಬುವವರ ಮಗಳನ್ನು ಮದುವೆ ಮಾಡಿ ಕೊಡಲಾಗಿದೆ ಎನ್ನುವುದು ಸರಿ.

2. ಸಿದ್ದು ಹುಲ್ಲೋಳ್ಳಿ ಮತ್ತು ಬಾಹುಬಲಿ ಹುಲ್ಲೋಳ್ಳಿ ಎನ್ನುವವರು ಸರ್ಕಾರದ ಉನ್ನತ ಹುದ್ದೆಯಲ್ಲಿದ್ದಾರೆ ಎನ್ನುವುದು ಸರಿ. ಆರೋಪಿತರು ನಮ್ಮಗಳ ಮೇಲೆ ನೀಡಿದ್ದ ದೂರಿನಲ್ಲಿ ಈಗ ಹೇಳಿದ ಇಬ್ಬರು ವ್ಯಕ್ತಿಗಳ ಹೆಸರು ಸಹ ಇದ್ದು ದೋಷಾರೋಪಣೆ ಪಟ್ಟಿಯಲ್ಲಿ ಅವರನ್ನು ಕೈಬಿಡಲಾಗಿದೆ ಎನ್ನುವುದು ಸರಿ.

3. ನಮ್ಮ ಮನೆಯಿಂದ ವಿವಾದಿತ ನಿವೇಶನ ಸಂಖ್ಯೆ 643 ಸುಮಾರು 7-8 ಕಿ.ಮೀ ದೂರದಲ್ಲಿದೆ ಎನ್ನುವುದಕ್ಕೆ ಸಾಕ್ಷಿ ಸುಮಾರು 4 ಕಿ.ಮೀ ದೂರದಲ್ಲಿದೆ ಎಂದು ಉತ್ತರಿಸಿದ್ದಾರೆ. ನಿವೇಶನ ಸಂಖ್ಯೆ 643 ರ ದಕ್ಷಿಣ ದಿಕ್ಕಿಗೆ ಮುಗಳಖೋಡಗೆ ಹೋಗುವ ಸಾರ್ವಜನಿಕ ರಸ್ತೆ ಇದೆ ಹಾಗೂ ಉತ್ತರ ದಿಕ್ಕಿಗೆ ಆರೋಪಿತರು ವಾಸಿಸುವ ಹಾಗೂ ಬೇರೆ ಪರಿಶಿಷ್ಟ ಜಾತಿಯವರು ವಾಸಿಸುವ ಮನೆಗಳು ಇವೆ ಎನ್ನುವುದು ಸರಿ.

4. ಘಟನೆ ನಡೆಯಿತು ಎಂದು ಹೇಳುವ 15 ದಿನಗಳ ಮೊದಲು ಪುರಸಭೆಯವರು ವಿವಾದಿತ ಸ್ಥಳದಲ್ಲಿ ಕಟ್ಟಡ ಕಟ್ಟಬಾರದು ಎಂದು, ಕಟ್ಟಡ ಕಟ್ಟಲು ಪರವಾನಿಗೆಯನ್ನು ನೀಡುವುದಿಲ್ಲ ಎಂದು ಹಿಂಬರಹ ನೀಡಿದ್ದರು ಎನ್ನುವುದಕ್ಕೆ ಸಾಕ್ಷಿ ಪುರಸಭೆಯವರೇ ನಮಗೆ ಕಟ್ಟಡ ಕಟ್ಟಲು ಅನುಮತಿ ನೀಡಿದ್ದರು ಎಂದು ಹೇಳಿದ್ದಾರೆ.

5. ಪುರಸಭೆಯವರು ಕಟ್ಟಡ ಕಟ್ಟಲು ನೀಡಿದ ಅನುಮತಿಯನ್ನು ರದ್ದು ಮಾಡಿದ್ದಾರೆ ಎನ್ನುವುದಕ್ಕೆ ಸಾಕ್ಷಿ ರದ್ದು ಮಾಡಿಲ್ಲ ಎಂದು ಹೇಳಿದ್ದಾರೆ.

6. ಘಟನೆ ನಡೆದ ದಿನ ಆರೋಪಿತರು ನಾವು ಕಟ್ಟಡ ಕಟ್ಟಲು ಹೋದಾಗ ಪುರಸಭೆಯವರು ಕಟ್ಟಡ ಕಟ್ಟಲು ನೀಡಿದ ಅನುಮತಿಯನ್ನು ರದ್ದು ಮಾಡಿದ್ದಾರೆ ಎಂದು ನಮ್ಮೊಂದಿಗೆ ತಕರಾರು ಮಾಡಿದ್ದರು ಎನ್ನುವುದು ಸರಿಯಲ್ಲ.

7. ವಿವಾದಿತ ಸ್ಥಳವು ಸುಮಾರು 20 ಅಡಿ ಆಳದಲ್ಲಿದೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಸುಮಾರು 6 ಅಡಿ ಆಳ ಮಾತ್ರ ಇದೆ ಎಂದು ಹೇಳಿದ್ದಾರೆ.

**ನ್ಯಾಯಾಲಯದ ಮುಂಜಾನೆ ಅವಧಿ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಮಧ್ಯಾಹ್ನ ಅವಧಿಗೆ ಕಾಯ್ದಿರಿಸಲಾಯಿತು.**

**ಸಾಕ್ಷಿಯನ್ನು ಪುನಃ ಮಧ್ಯಾಹ್ನ 3.00 ಗಂಟೆಗೆ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು**

**ಮುಂದುವರೆದ ಪಾಟೀ ಸವಾಲು: 1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್ ವಕೀಲರಿಂದ**

8. ಕಟ್ಟಡ ಕಟ್ಟಲು ನಾವು ಯಾರಿಗೂ ಗುತ್ತಿಗೆ ಕೊಟ್ಟಿರಲಿಲ್ಲ, ಆದರೆ ಸ್ಥಳವನ್ನು ಸ್ವಚ್ಚಗೊಳಿಸಲು ನಾವು ಹೋಗಿದ್ದೇವು. ನಿವೇಶನದ ದಾಖಲೆಗಳು ಹಾಗೂ ಕಟ್ಟಡದ ನೀಲಿ ನಕ್ಷೆಯನ್ನು ನಾವು ಪುರಸಭೆಯವರಿಗೆ ನೀಡಿದ್ದೇವು.

9. ಮುಗಳಖೋಡ ಗ್ರಾಮದಲ್ಲಿ ಮುಗಳಖೋಡ ಮಠ ಇರುವುದರಿಂದ ಮುಗಳಖೋಡ ಗ್ರಾಮ ಪ್ರಸಿದ್ಧಿಯಾಗಿದೆ ಎನ್ನುವುದು ಸರಿ. ಅಲ್ಲಿ ದೊಡ್ಡ ಜಾತ್ರೆ ಆಗುತ್ತದೆ ಎನ್ನುವುದು ಸರಿ. ಅಲ್ಲಿ ಧಾರ್ಮಿಕ ಕಾರ್ಯಗಳು ನಿರಂತರ ನಡೆಯುತ್ತವೆ, ದೇಶ ವಿದೇಶಗಳಿಂದ ಭಕ್ತರು ಬರುತ್ತಾರೆ ಎನ್ನುವುದು ಸರಿ. ಈ ಘಟನೆ ನಡೆಯುವ ಎರಡು ವರ್ಷಗಳ ಪೂರ್ವದಲ್ಲಿ ಮುಗಳಖೋಡ ಗ್ರಾಮವನ್ನು ಗ್ರಾಮ ಸಭೆಯಿಂದ ಪುರಸಭೆಗೆ ಬಡ್ತಿ ನೀಡಲಾಯಿತು ಎನ್ನುವುದು ಸರಿ.

10. ನಿವೇಶನ ಸಂಖ್ಯೆ 643 ಮುಗಳಖೋಡ ಮಠದಿಂದ 500 ಮೀಟರ ದೂರದಲ್ಲಿದೆ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ಒಂದು ಕಿಲೋಮೀಟರ ದೂರದಲ್ಲಿದೆ ಎಂದು ಹೇಳಿದ್ದಾರೆ.

11. ನಿವೇಶನ ಸಂಖ್ಯೆ 643 ರ ಮೇಲೆ ನಿಮಗೆ ಯಾವುದೇ ಹಕ್ಕು, ಅಧಿಕಾರ ಇಲ್ಲದೇ ಇದ್ದರೂ ಸಹ ಆ ಸ್ಥಳದ ಬೆಲೆ ಜಾಸ್ತಿಯಾಗಿರುವುದರಿಂದ ಆ ನಿವೇಶನವನ್ನು ನಾವು ಪಡೆದುಕೊಳ್ಳಬೇಕೆಂದು ಹಾಗೂ ಅದರ ಸುತ್ತಮುತ್ತ ವಾಸ ಇರುವ ಆರೋಪಿತರನ್ನು, ಇತರ ಪರಿಶಿಷ್ಟ ಜಾತಿಯವರನ್ನು ಆ ಸ್ಥಳದಿಂದ ದೂರ ಇರಿಸಬೇಕು ಎನ್ನುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

12. ನಮ್ಮ ಕುಟುಂಬದವರೆಲ್ಲಾ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಆರೋಪಿತರ ಮೇಲೆ ಸುಳ್ಳು ದೂರು ಕೊಟ್ಟಿದ್ದೇವೆ ಎನ್ನುವುದು ಸರಿಯಲ್ಲ.

13. ದಿಃ 26-08-2017 ರಂದು ಬೆಳಗ್ಗೆ 9:00 ಗಂಟೆಗೆ ನಾನು, ನಮ್ಮ ಕುಟುಂಬದವರು ಮತ್ತು ಇತರರು ಕಟ್ಟಡ ಕಟ್ಟುವ ವಿಚಾರದಲ್ಲಿ ನಿವೇಶನ ಸಂಖ್ಯೆ 643 ಕ್ಕೆ ಹೋಗಿದ್ದಾಗ ಆರೋಪಿತರು ಕಟ್ಟಡ ಕಟ್ಟದಂತೆ ತಕರಾರು ಮಾಡಿದರು, 2 ನೇ ಆರೋಪಿ ನನಗೆ ಕಬ್ಬಿಣದ ರಾಡ್‌ನಿಂದ, 3 ನೇಆರೋಪಿ ವಿಠ್ಠಲ ಕಲ್ಲಿನಿಂದ ನನ್ನ ತಲೆಗೆ ಹೊಡೆದನು ಎಂದು, ಉಳಿದವರು ನಮ್ಮ ಅಣ್ಣತಮ್ಮಂದಿರಿಗೆ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಆರೋಪಿತರು ಸ್ಥಳಕ್ಕೆ ಇನ್ನೊಂದು ಸಾರಿ ಬಂದರೆ ನಿಮ್ಮನ್ನು ಜೀವ ಸಹಿತ ಉಳಿಸುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

14. ದಿಃ 26-08-2017 ರಂದು ನಾನು ಮತ್ತು ನನ್ನ ಕುಟುಂಬದವರು ಆರೋಪಿತರ ಮೇಲೆ ಹಲ್ಲೆ ಮಾಡಿದ್ದೇವೆ, ನಮಗೆ ಯಾವುದೇ ಗಾಯಗಳು ಆಗದೇ ಇದ್ದರೂ ಸಹ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಮ್ಮ ಕುಟುಂಬದ ಬೇರೆ ಬೇರೆ ಸದಸ್ಯರು ಉನ್ನತ ಹುದ್ದೆಯಲ್ಲಿರುವುದರಿಂದ ಅಧಿಕಾರ ದುರುಪಯೋಗಪಡಿಸಿಕೊಂಡು ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದು, ಅದರಂತೆ ನಾನು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು:5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ ಶ್ರೀ.ಆರ್.ಕೆ.ಬಿ ವಕೀಲರು**

1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿದ್ದಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.